ವ್ಯವಸ್ಥೆಯನ್ನು ತರತಕ್ಕ ದಿಕ್ಕಿನಲ್ಲಿ ಸಾಗುತ್ತಿದ್ದೇವೆ. ಇಲ್ಲಿ ಇರುವ ನ್ಯೂನತೆಗಳು ಏನು ಇವೆ, ಇವುಗಳನ್ನು ಸುಧಾರಿಸುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಕೂಪನ್ ಸಿಸ್ಟಂನ್ನು ನಾವು ತರುತ್ತಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲೂ ಬಿಲೋ ದಿ ಪಾವರ್ಟಿ ಲೈನ್ ಇರತಕ್ಕ ಜನತೆಯನ್ನು ಇವರುಗಳು ಹುಡುಕುವುದಕ್ಕೆ ಗ್ರಾಮಸಭೆಗಳನ್ನು ಮಾಡಿ ಯಾರು ಬಿಲೊ ದಿ ಪಾವರ್ಟಿ ಲೈನ್‌ನಲ್ಲಿವ್ದಾರೋ ಅವರನ್ನು ಹುಡುಕುವುದಕ್ಕೆ ಆದೇಶ ಕೂಡ ಸರ್ಕಾರದಿಂದ ಹೋಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಆ ಒಂದು ಜನತೆಯನ್ನು ಹುಡುಕಿ ಇವತ್ತು ಕಡಿಮೆ ದರದಲ್ಲಿ ಆಹಾರಧಾನ್ಯಗಳನ್ನು ವಿತರಣೆ ಮಾಡತಕ್ಕ ಕಾರ್ಯ ಕೂಡ ರಾಜ್ಯಸರ್ಕಾರದಿಂದ ನಡೆದಿದೆ ಎನ್ನುವುದನ್ನು ಸನ್ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಪ್ರತಿಯೊಂದು ಜಿಲ್ಲೆಯಲ್ಲೂ ಅದಷ್ಟು ಬೇಗನೆ ಅವರನ್ನು ಹುಡುಕುವ ವ್ಯವಸ್ಥೆಯನ್ನು ಮಾಡಬೇಕಾದ ಒಂದು ಅವಶ್ಯಕತೆ ಇದೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಾನು ಏನು ಕೇಳಿದ್ದೇನೋ ಅದನ್ನು ಬಿಟ್ಟು ಅದಕ್ಕೆ ತದ್ವಿರುದ್ಧವಾಗಿ ಮತ್ತೆಲ್ಲಾ ಅವರು ಹೇಳುತ್ತಿದ್ದಾರೆ. ಅವರು ಬಿಪಿಎಲ್ ಲಿಸ್ಟನ್ನು ಮಾಡುವುದಿಲ್ಲ, ಅವರ ಇಲಾಖೆಯವರ ಜೊತೆ ರೆವಿನ್ಯೂ ಇಲಾಖೆಯವರು ಸಹಕರಿಸುತ್ತಿಲ್ಲ. ಬೀಲೊ ದಿ ಪಾವರ್ಟಿ ಲಿಸ್ಟನ್ನು ಕೂಡ ಅವರು ಮಾಡಲಿಲ್ಲ, ಅವರಿಗೆ ಆಹಾರಧಾನ್ಯಗಳನ್ನು ಹಂಚುವುದಕ್ಕೂ ಕೂಡ ಆಗುವುದಿಲ್ಲ. ಅವರ ಅಧಿಕಾರಿಗಳನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಲಿಲ್ಲ. ಅವರ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಗ್ರಾಮೀಣ ಪ್ರದೇಶದ ಬಡವರಿಗೆ ಅಕ್ಕಿ ಸಕ್ಕರೆ ಪಡಿತರವನ್ನು ಹಂಚುವುದರಲ್ಲಿ ಸರ್ಕಾರ ವಿಫಲವಾಗಿದೆ. ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು.)

ಶ್ರೀ ಡಿ.ಬಿ. ಇನಾಮದಾರ್: ನ್ಯಾಯಬೆಲೆ ಅಂಗಡಿಗಳು ಸರಿಯಾಗಿ ನಡೆದಿಲ್ಲ ಎನ್ನುವುದರ ಬಗ್ಗೆ ನೀವು ಕಂಪ್ಲೇಂಟನ್ನು ಕೊಟ್ಟಿರುವ ಬಗ್ಗೆ ವಿವರಗಳನ್ನು ಕೊಡಬೇಕು. ಸುಮ್ಮನೆ ಸರಿಯಾಗಿ ನಡೆದಿಲ್ಲ ಎಂದು ಹೇಳುವುದು ಸರಿಯಲ್ಲ.

ವಿಷಯ: (v) ಕೊಪ್ಪಳದ ಎರಡು ರಸ್ತೆಗಳ ಅಗಲೀಕರಣ

ಶ್ರೀ ಕರಡಿ ಸಂಗಣ್ಣ (ಕೊಪ್ಪಳ): ಮಾನ್ಯ ಅಧ್ಯಕ್ಷರೇ, ಕೊಪ್ಪಳದಲ್ಲಿ ಎರಡು ರಸ್ತೆಗಳನ್ನು ಅಗಲೀಕರಣ ಮಾಡುವ ಬಗ್ಗೆ.

ಛೇರ್ಮನ್: ಯಾವ ವಿಚಾರದ ಮೇಲೆ ನೀವು ಮಾತನಾಡಿದರೆ, ಯಾವ ಸಚಿವರು ನಿಮಗೆ ಉತ್ತರವನ್ನು ಕೊಡಬೇಕು?

ಶ್ರೀ ಕರಡಿ ಸಂಗಣ್ಣ: ಮಾನ್ಯ ಚಿಮ್ಮನಕಟ್ಟಿಯವರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೇ, ಒಂದು ಪ್ರಶ್ನೆಯನ್ನು ಅವರು ಎತ್ತಿದ್ದಾರೆ, ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ರಸ್ತೆಗಳನ್ನು ಅಗಲ ಮಾಡಬೇಕೆಂದು ಹೇಳಿ ಅಲ್ಲಿ ಪುರಸಭೆಯವರು ಮತ್ತು ಜಿಲ್ಲಾಡಳಿತದವರು ಮನೆಗಳನ್ನು ಬೀಳಿಸುತ್ತಿದ್ದಾರೆ. ಅಲ್ಲಿಯ